ದಿನಾಂಕಃ **01-09-2023** ಓ.ಎಸ್. ನಂ.**444/2022**

ಪಿ.ಡಬ್ಲ್ಯೂ: **2**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ :ವಾದಿ ಪರ ಶ್ರೀ ಎಮ್.ಎಮ್.ಆರ್ ವಕೀಲರಿಂದ,

ನಾನು ವಾದಿ ಪರ ಸಾಕ್ಷಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲ ಸತ್ಯವಾಗಿರುತ್ತವೆ. ಆ ಪ್ರಮಾಣಪತ್ರವನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಿಪಿ-**1** ರ ಕರಾರಿಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದು. ವಾದಿ ಮತ್ತು ಪ್ರತಿವಾದಿಯರು ಆ ದಾಖಲೆಯ ಎಲ್ಲಾ ಪುಟಗಳಿಗೆ ಸಹಿ ಮಾಡಿದ್ದಾರೆ. ವಾದಿಯ ಸಹಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**1(**ಎ**)** ಎಂದು, ಪ್ರತಿವಾದಿಯ ಸಹಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**1(**ಬಿ**)** ಎಂದು, ನನ್ನ ಸಹಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**1(**ಸಿ**)** ಎಂದು ಗುರುತಿಸಲಾಯಿತು. ನನ್ನೊಂದಿಗೆ ರೋಹನ ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಅವರ ಸಹಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**1(**ಡಿ**)** ಎಂದು ಗುರುತಿಸಲಾಯಿತು.

ದಿನಾಂಕಃ **01-09-2023** ಓ.ಎಸ್. ನಂ.**444/2022**

ಪಿ.ಡಬ್ಲ್ಯೂ: **2**

**(**ಪ್ರತಿವಾದಿ ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲ ಮತ್ತು ಅವರನ್ನು ಈ ದಿನ ಯಾರೂ ಪ್ರತಿನಿಧಿಸಿಲ್ಲವಾದ್ದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿದೆ.**)**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.**)**

ಓದಿ ಹೇಳಿ ಕೇಳಿ ಸರಿ ಇದೆ.

**2** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಬೆಳಗಾವಿ.